ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 84-90
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ರಾಮಾಯಣಕ್ಕೆ ತಿರುವು ಕೊಟ್ಟ ಮಂಥರ ಪಾತ್ರದ ವ್ಯಕ್ತಿತ್ವ ವಿಶ್ಲೇಷಣೆ

**ಕಲ್ಪನ ಪಿ**
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು
ಚಿಕ್ಕನಾಯಕನಹಳ್ಳಿ, ತುಮಕೂರು ಜಿಲ್ಲೆ

***Abstract:***

*ಈ ಸಂಶೋಧನಾ ಲೇಖನವು ರಾಮಾಯಣ ಮಹಾಕಾವ್ಯದ ಅಯೋಧ್ಯ ಕಾಂಡದಲ್ಲಿ ಬರುವ ಪ್ರಭಾವಶಾಲಿ ಹಾಗೂ ಮಹತ್ವದ ಪಾತ್ರವಾದ ಮಂಥರೆಯ ವ್ಯಕ್ತಿತ್ವವನ್ನು ವಿಶ್ಲೇಷಿಸುತ್ತದೆ. ಅವಳನ್ನು ಕೇವಲ ಕುರೂಪಿ, ಕುಟಿಲ ಖಳನಾಯಕಿಯಾಗಿ ನೋಡಿದರೂ ರಾಮಾಯಣ ಕಥೆಯ ಮುನ್ನಡೆಗೆ ಹಾಗೂ ನಿರ್ಣಾಯಕ ತಿರುವಿಗೆ ಕಾರಣಕರ್ತಳಾಗಿದ್ದಾಳೆ. ಕೈಕೆಯ ನಂಬಿಗಸ್ತ ದಾಸಿಯಾಗಿ ತನ್ನ ಒಡತಿಯ ಹಾಗೂ ಅವಳ ಮಗ ಭರತನ ಮೇಲಿದ್ದ ಅತಿ ಮಮತೆಯಿಂದ ಸವತಿ ಮಾತ್ಸರ್ಯವನ್ನು ಬಂಡವಾಳವಾಗಿಸಿಕೊಂಡು ರಾಜ ಮನೆತನದ ಮಹತ್ವದ ನಿರ್ಧಾರವನ್ನೇ ಬದಲಾಯಿಸುವ ಆಕೆಯ ಸಾಮರ್ಥ್ಯವನ್ನು ಚರ್ಚಿಸಲಾಗಿದೆ. ರಾಮನ ಮೇಲಿನ ಮಾತೃವಾತ್ಸಲ್ಯದಿಂದ ಕೂಡಿದ್ದ ಕೈಕೇಯಿಯ ಮನಸ್ಸಿನಲ್ಲಿ ಭರತನ ಭವಿಷ್ಯದ ಬಗ್ಗೆ ಭೀತಿಯನ್ನು ಬಿತ್ತುತ್ತಾಳೆ. ರಾಷ್ಟ್ರಕವಿ ಕುವೆಂಪುರವರು ಈಕೆಯನ್ನು ಕೇವಲ ದುಷ್ಟ ದಾಸಿ ಎಂದು ಕಡೆಗಣಿಸದೆ ಮಾನವನ ಸಹಜ ದೌರ್ಬಲ್ಯಗಳಾದ ಸ್ವಾರ್ಥ, ಈರ್ಷೆ, ಮತ್ತು ಅತಿಯಾದ ಮಮತೆಯ ಪ್ರತೀಕವಾಗಿ ಹೊಸ ಆಯಾಮದಲ್ಲಿ ಕಟ್ಟಿಕೊಟ್ಟಿದ್ದಾರೆ.*

**Keywords:** *ರಾಮಾಯಣ, ಶ್ರೀ ರಾಮ, ಕೈಕೇಯಿ, ಮಂಥರ, ಭರತ.*

## ಪೀಠಿಕೆ

ರಾಮಾಯಣದ ವಿಶೇಷ ಪಾತ್ರ ಮಂಥರ. ಅವಳನ್ನು ಕುರೂಪಿಯಂತೆ ಚಿತ್ರಿಸಲಾಗಿದೆ. ರಾಮಾಯಣಕ್ಕೆ ಒಂದು ತಿರುವು ಕೊಟ್ಟ ಪಾತ್ರ. ಮಂಥರ ಕೈಕೇಯಿಯ ನಂಬಿಗಸ್ತ ಸೇವಕಿ. ಅಯೋಧ್ಯೆಯ ಸಿಂಹಾಸನವು ಭರತನಿಗೆ ಸೇರಬೇಕೆಂದು ಕೈಕೇಯಿಗೆ ಮನವರಿಕೆ ಮಾಡಿಕೊಟ್ಟವಳು. ಕುವೆಂಪು ಚಿತ್ರಿಸುವಂತೆ ಕರುಣಾಳು ಮಂಥರ. ಮಂಥರ ಇಲ್ಲದಿದ್ದರೆ ರಾಮನ ವ್ಯಕ್ತಿತ್ವ ನಾಡಿನಾದ್ಯಂತ ಪ್ರಜ್ವಲಿಸುತ್ತಿರಲಿಲ್ಲ. ಮಂಥರ ಕೈಕೇಯಿಯ ದಾಸಿ. ಅವಳು ಕೈಕೇಯಿಯ ತವರು ಮನೆಯಿಂದ ಬಂದವಳು. ಕೈಕೇಯಿಯ ಜೊತೆಯಲ್ಲಿಯೇ ಇರುತಿದ್ದಳು. ಇವಳು ಅಷ್ಟಾವಕ್ರದ ವಿಶ್ವಮೂರ್ತಿಯಾಗಿದ್ದಾಳೆಂದು ಊಹಿಸಬಹುದು. ಕ್ಷತ್ರಿಯರಾದ ಇಕ್ಷ್ವಾಕು ವಂಶದವರು ಧರ್ಮನಿಷ್ಠರು, ವಚನಪಾಲಕರು, ಜೇಷ್ಠ ಪುತ್ರನಿಗೆ ಪಟ್ಟಗಟ್ಟುವ ಸತ್ಯ ಪರಾಕ್ರಮಿಗಳು, ದಯಾಪರರು, ಪ್ರಜಾಪಾಲನೆಯಲ್ಲಿ ಮಾತಾ ಪಿತರಂತೆ ನಡೆದುಕೊಂಡವರು. ವಾತ್ಸಲ್ಯವನ್ನು ಸ್ನೇಹದ ಮಟ್ಟಕ್ಕೇರಿಸಿ ನಡೆದುಕೊಂಡವರು, ರಘುವಂಶ ಎಂದರೆ ಸತ್ ಕೀರ್ತಿಯ ಪ್ರತೀಕ. ಹೀಗೆ ದಶರಥನು ತನ್ನ ಹಿರಿಯ ಮಗ ಶ್ರೀರಾಮನಿಗೆ

***Please cite this article as:*** ಕಲ್ಪನ, ಪಿ. (2026). ರಾಮಾಯಣಕ್ಕೆ ತಿರುವು ಕೊಟ್ಟ ಮಂಥರ ಪಾತ್ರದ ವ್ಯಕ್ತಿತ್ವ ವಿಶ್ಲೇಷಣೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 5(1), 84–90

ಪಟ್ಟವನ್ನು ಕಟ್ಟಬೇಕಾದ ಸುಸಂದರ್ಭದಲ್ಲಿ ಮಂಥರೆಯು ಕೈಕೇಯಿಗೆ ದುರ್ಬೋಧನೆಯನ್ನು ಮಾಡುತ್ತಾಳೆ. ಆ ದುರ್ಬೋಧನೆಗೆ ಪ್ರಚೋದಿತಳಾದ ಕೈಕೇಯಿ ಪತಿಯು ಕೊಟ್ಟಿದ್ದ ಎರಡು ವರಗಳನ್ನು ಶ್ರೀರಾಮನ ಪಟ್ಟಾಭಿಷೇಕದ ಶುಭ ಸಂದರ್ಭದಲ್ಲಿ ಕೊಡೆಂದು ಹಠ ಹಿಡಿಯುತ್ತಾಳೆ. ಅದರಿಂದ ಭರತ ಯುವರಾಜನಾಗಬೇಕು, ಶ್ರೀರಾಮ ಹದಿನಾಲ್ಕು ವರ್ಷ ದಂಡಕಾರಣ್ಯದಲ್ಲಿ ವನವಾಸ ಮಾಡಬೇಕು. ದಶರಥ ಸತ್ಯಸಂಧನಾಗಿ ಉಳಿಯಲು ಹೆಂಡತಿಗೆ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕಾಗಿದೆ. ಕೈಕೇಯಿ ಇವಳ ದುರ್ಬೋಧನೆಗೊಳಗಾದ ಮೇಲೆ ಮಂಥರೆಯ ಸೌಂದರ್ಯವನ್ನು ಬಹುವಾಗಿ ಮೆಚ್ಚಿಕೊಳ್ಳುತ್ತಾಳೆ. ಕವಿಯು ಅವಳ ರೂಪಿನ ವಿಡಂಬನೆ ಮಾಡಿದ್ದಾನೆ. ಕಾಮಾಲೆ ರೋಗದ ಕೈಕೇಯಿಗೆ ಎಲ್ಲ ವಸ್ತುಗಳು ಹಳದಿಯಾಗಿಯೇ ಕಾಣುತ್ತವೆ. ಹಾಗೆ ಗೂನಿಯಾದಂತಹ ಮಂಥರೆಯು ಕೈಕೇಯಿಯ ಕಣ್ಣಿಗೆ ಬುದ್ಧಿವಂತೆ, ಬಾಗಿದ ತಾವರೆಯ ಬಳ್ಳಿಯಂತೆ ಚಂದ್ರಮುಖಿಯಾಗಿ ಕಾಣುತ್ತಾಳೆ. ಕುಟಿಲಮತಿ ಪ್ರವೀಣೆಯಾಗಿ ಚಂಡಿ ಹಿಡಿದ ಶಿಶು ರಾಮಚಂದ್ರನಿಗೆ ಚಂದ್ರನನ್ನು ಹಿಡಿದು ಕೊಟ್ಟಂತಹ ಚಾಕಚಕ್ಯತೆಯ ಕೆಲಸಗಳನ್ನು ಮಾಡಿ ಕೈಕೇಯಿ ತಾಯಿಯ ಪ್ರೀತಿಯನ್ನು ಗಳಿಸುತ್ತಾಳೆ.

ಒಂದು ಕಡೆ ಮಾತೃವಾತ್ಸಲ್ಯದ ಸೆಲೆಯಿದ್ದರೂ ಸಹ ಇನ್ನೊಂದು ಕಡೆ ರಾಮನ ಜೀವನಕ್ಕೆ ಖಳನಾಯಕಿಯಾಗುತ್ತಾಳೆ. ಆದರೂ ರಾಮಾಯಣ ಮುನ್ನಡೆಯಲು ಬಹಳ ಪ್ರಮುಖ ಪಾತ್ರವಾಗಿ ನಿಲ್ಲುತ್ತಾಳೆ. ರಾಮಾಯಣದ ತಿರುವಿಗೆ ಕಾರಣಕರ್ತಳು ಮಂಥರೆ. ಕೈಕೇಯಿಯ ವಿವಾಹದ ಸಂದರ್ಭದಲ್ಲಿ ಅಯೋಧ್ಯೆಗೆ ಬಂದ ಮಂಥರೆಯು ನಿಮಗೆ ಏನಾದರೂ ಒಳ್ಳೆಯದನ್ನು ಮಾಡೋಣವೆಂದು ಇಲ್ಲಿಗೆ ಬಂದೆನು ಎಂದು ತನ್ನ ದುರ್ಬೋಧನೆಯ ಸಂದರ್ಭದಲ್ಲಿ ಹೇಳಿದ್ದಾಳೆ. ಇದು ನಿಜವಿದ್ದರೂ ಇರಬಹುದು. ಕುತಂತ್ರಿ ಮಂಥರೆಯು ಅಯೋಧ್ಯ ಅರಮನೆಯ ಬಾಳು, ಚಿಕ್ಕ ಹೆಂಡತಿಯ ಸೌಂದರ್ಯಕ್ಕೆ ಶರಣಾಗುವ ಮುದಿ ಗಂಡ ದಶರಥ, ಸವತಿಯರ ಕೀಟಲೆಗಳು ಸೌಂದರ್ಯವನ್ನೇ ಹೊತ್ತ ಏರು ಜವ್ವನಿಯಾದ ಕೈಕೇಯಿಯು ಇವುಗಳನ್ನೆಲ್ಲ ಕ್ಷಣಮಾತ್ರದಲ್ಲಿ ಚಿತ್ರಿಸಿಕೊಂಡು ತನ್ನ ಕುಟಿಲ ಬುದ್ಧಿಗೂ ತನ್ನ ಸ್ವಾರ್ಥಕ್ಕೂ ಸರಿಯಾದ ಸಮಯ ಸಿಕ್ಕಿತೆಂದು ಸ್ವಾರ್ಥ ಸಾಧನೆಗೆ ಧರ್ಮವನ್ನು ಬಳಸಿಕೊಂಡು ಅಧರ್ಮ ಪ್ರವರ್ತಕರು ಏನನ್ನು ಬೇಕಾದರೂ ಮಾಡುವಂತೆ ಮಂಥರೆಯಾದರೂ ಕೈಕೇಯಿಯಲ್ಲಿ ಸಹಜವಾದ ಪ್ರೀತಿ ಉಳ್ಳವಳು ಸ್ವಾರ್ಥಪರಳೂ ಆಗಿದ್ದಳು. ಒಡತಿ ಸೇವಕಿಯರ ಅನ್ಯೋನ್ಯ ಪ್ರೀತಿಯೇ ಈ ಎಲ್ಲಾ ಕೆಲಸಗಳಿಗೂ ಮೂಲ. ಅವಳ ಸ್ವಾರ್ಥಕ್ಕೆ ಕುಶಾಗ್ರ ಬುದ್ಧಿ ಆಶ್ರಯವಾಗಿತ್ತು. ಮಂಥರೆಯ ತೀಕ್ಷ್ಣ ಬುದ್ಧಿ ಸುಮ್ಮನಿರುವಂಥದ್ದಲ್ಲ. ಇವಳ ವಕ್ರದೇಹವು ಮಾತ್ರ ಎಲ್ಲ ಸೇವಕೀಯರ ಅಪಹಾಸ್ಯಕ್ಕೆ ಗುರಿಯಾಗಿತ್ತು. ಇದು ಇತರ ಸೇವಕೀಯರನ್ನು ರಾಣಿಯರನ್ನು ದ್ವೇಷಿಸಲು ಸಾಕಷ್ಟು ಕಾರಣವಾಯಿತು. ಮೂಲ ರಾಮಾಯಣದ ಮಂಥರೆ ನಾನಾ ಕುಯುಕ್ತಿಯಿಂದಲೂ ವಾಕ್ಚಾತುರ್ಯದಿಂದಲೂ ವಿಷಯ ಸಂಗ್ರಹ ಮಾಡಿ ಅವುಗಳನ್ನು ಹದಗೊಳಿಸಿ ಕೈಕೇಯಿಯ ಮನಸ್ಸಿಗೂ ಮತಿಗೂ ಹಿತವಾಗುವಂತೆ ಹೇಳಿ ಸವತಿ ಮಾತ್ಸರ್ಯವು ಉಲ್ಬಣಗೊಳ್ಳುವಂತೆ ಮಾಡಿ ತನ್ಮೂಲಕ ತನ್ನ ದ್ವೇಷವನ್ನು ಹಿರಿದು ಮಾಡಿಕೊಂಡು ತನ್ನ ಸ್ವಾರ್ಥದ ಸ್ವರೂಪವನ್ನು ಸೃಷ್ಟಿಸಿಕೊಂಡಳು. ಇವಳ ಸ್ವಾರ್ಥತೆಯ ಪ್ರಭಾವವೆಂತದ್ದೆಂದರೆ ಅವಳನ್ನು ಕೈಕೇಯಿಯನ್ನು ಈ ಪ್ರಸಂಗಾವಧಿಯಲ್ಲಿ ವಶಿಷ್ಠ ದಶರಥ ಲಕ್ಷ್ಮಣ ಕೌಸಲ್ಯ ಮುಂತಾದವರು ನಿಂದಿಸಿದಾಗ ಅವರೆಲ್ಲರನ್ನು ಸ್ವಾರ್ಥಪರರೆಂದು ವಾದಿಸಿ ಕೈಕೇಯಿಯಲ್ಲಿ ಸುಪ್ತವಾಗಿದ್ದ ಸ್ವಾರ್ಥತೆಯನ್ನು ಎಚ್ಚರಗೊಳಿಸುತ್ತಾಳೆ. ಕೈಕೇಯಿಗೆ ಮಂಥರೆ ಮೊದಮೊದಲು ಇಷ್ಟವಾಗಲಿಲ್ಲ. ಮಂಥರೆ ಕೈಕೇಯಿಯ ಸ್ವಾರ್ಥವನ್ನು ಕೆರಳಿಸುತ್ತಾಳೆ. ಆಗ ಸ್ವಾರ್ಥವು ನಿಷ್ಪಕ್ಷಪಾತಕ್ಕೆ ಎಡೆ ಕೊಡುವುದಿಲ್ಲ. ಹಾಗೆ ಕೈಕೇಯಿಯು ಮಂಥರೆಯ ಪಾಲಿನ

ಆಯುಧವಾಗುತ್ತಾಳೆ. ಕೈಕೇಯಿಯಲ್ಲಿದ್ದ ಸಲಿಗೆಯ ಮಟ್ಟ ಅವಳ ಹೆಬ್ಬಯಕೆಯ ಆಧಾರವಾಗುತ್ತದೆ.

ಶ್ರೀರಾಮನ ತಂದೆಯಾದ ದಶರಥ ಚಕ್ರವರ್ತಿಯನ್ನು ಪ್ರಿಯ ಪತ್ನಿಯ ಎದುರಿಗೆ ಹಳಿಯುತ್ತಾಳೆ, ಶ್ರೀರಾಮನ ಪಿತ ಕಪಟಿ, ಕ್ರೂರಿ, ದುರ್ಬುದ್ದಿಯವನು, ಸುಳ್ಳುಗಾರ ಎಂದು ನುಡಿಯುತ್ತಾಳೆ. ಭರತನ ತಾಯಿಯಾದ ಕೈಕೇಯಿಗೂ ಮೂರ್ಖಳು, ಬುದ್ಧಿಗೇಡಿ, ದಡ್ಡೆ ಎಂದೇ ಸಂಬೋಧಿಸುತ್ತಾಳೆ. ಕುಟಿಲ ಮತಿಗೆ ತೀಕ್ಷ್ಣತೆ ಇರುತ್ತದೆ. ಜಾಣ್ ನುಡಿಗಳ ಭಂಡಾರವಿರುತ್ತದೆ. ಮಾತನಾಡುವುದರಲ್ಲಿ ನಿಪುಣೆಯಾದ ಆ ಗೂನಿ ಇನ್ನೂ ಹೆಚ್ಚಿನ ದುಃಖವನ್ನು ತೋರಿಸುತ್ತಾ, ತಾನು ಬಹಳ ಹಿತೈಷಿಣಿಯಂತೆ ನಟಿಸುತ್ತಾ ಕೈಕೇಯಿಗೆ ಖೇದವನ್ನುಂಟು ಮಾಡುತ್ತಾ ಶ್ರೀ ರಾಮನ ವಿಷಯದಲ್ಲಿ ಒಡಕು ಬುದ್ಧಿಯನ್ನು ಹುಟ್ಟಿಸುವುದಕ್ಕಾಗಿ ಅರಮನೆಯ ಒಳಗುದಿಯಲ್ಲಿ ಸವತಿ ಮಾತ್ಸರ್ಯದ ವಜ್ರಾಯುಧವನ್ನು ಬಳಸಿಕೊಳ್ಳುತ್ತಾಳೆ. ಕ್ಷಮೆಯಲ್ಲಿ ಸ್ತ್ರೀ ಧರಿತ್ರಿಗೆ ಸಮಾನ. ಆದರೆ ಸವತಿ ಮಾತ್ಸರ್ಯದ ಉರಿ ತ್ರಿಲೋಕವನ್ನೇ ಸುಡಬಲ್ಲದು ಆ ಉರಿಗೆಂಡವನ್ನು ಧರಿಸಬಲ್ಲ ಶಕ್ತಿ ಸ್ತ್ರೀಶಕ್ತಿಯಲ್ಲಿ ಗರ್ಭಿಕೃತವಾಗಿದೆ ಎಂಬುದನ್ನು ಬಹು ಅರ್ಥಗರ್ಭಿತ ಶಬ್ದಗಳಿಂದ ಕವಿ ಹೇಳಿದ್ದಾರೆ. ಪರಸ್ಪರ ರಾಣಿಯರ ಬಗೆಗೆ ಮಾತಾಡಿ ಹೊಗಳಿ– ತೆಗಳಿ ಕಟೋಕ್ತಿಗಳನ್ನು ಪ್ರಯೋಗಿಸಿ ಆ ನುಡಿಗಳಿಗೆ ಬಣ್ಣ ಕಟ್ಟಿ ಚಾಡಿ ಹೇಳಿ ತಮ್ಮ ತಮ್ಮ ರಾಣಿಯರ ಮೆಚ್ಚುಗೆ ಪಡೆಯುತ್ತಿದ್ದುದೇ ನಿತ್ಯ ವ್ಯವಹಾರವಾಗಿದೆ.

ಮಂಥರೆಯು ಮಾತಿನ ನಿಪುಣೆಯಷ್ಟೇ ಅಲ್ಲ ನಟನೆಯಲ್ಲಿ ಪ್ರವೀಣೆ. ಬಹು ಚಾಕಚಕ್ಯತೆಯಿಂದ ಶ್ರೀ ರಾಮನ ಪಟ್ಟಾಭಿಷೇಕವನ್ನು ತಿಳಿದು ಸಿಟ್ಟಿನಿಂದ ಉರಿದು ಹೋದಳು. ಕೈಕೇಯಿಯ ಬಳಿ ಬಂದು ಅಯ್ಯೋ ಮೂಢೇ, ಏಳು ಇನ್ನೂ ಮಲಗಿದ್ದೀಯಾ? ಭಯಂಕರವಾದ ವಿಪತ್ತು ನಿನ್ನನ್ನು ಸುತ್ತು ಕಟ್ಟಿದೆ. ಕಷ್ಟದ ಪರಂಪರೆ ನಿನ್ನನ್ನು ಮುತ್ತಿಕೊಂಡಿದೆ ಎಂದು ನಿನಗೆ ಗೊತ್ತಿಲ್ಲವೇ? ನಿನ್ನ ಗಂಡನಿಗೆ ನಿನ್ನ ಮೇಲೆ ಪರಮ ಪ್ರೀತಿ ಎಂದು ನಿನ್ನ ಸೌಭಾಗ್ಯವನ್ನು ಹೇಳಿಕೊಳ್ಳುತ್ತಾ ಅನಿಷ್ಟವಾದ ಆ ಸುಭಗನ ವಿಷಯದಲ್ಲಿ ಜಂಬ ಹೊಡೆಯುತ್ತಿದ್ದೀಯಲ್ಲ ನಿನ್ನ ಸೌಭಾಗ್ಯ ಸ್ಥಿರವಾದದ್ದಲ್ಲ. ಅದು ಬೇಸಿಗೆಯ ನದಿ ಪ್ರವಾಹವಿದ್ದಂತೆ ಆಗಿದೆ ಎಂದು ಸಿಟ್ಟಿನಿಂದ ಕಠೋರವಾದ ನುಡಿಕಿಡಿಗಳನ್ನು ಹಾರಿಸುತ್ತಾಳೆ. ಕೈಕೇಯಿಯ ಶುದ್ಧ ಮನಸ್ಸಿನವಳಾಗಿದ್ದರಿಂದ ಮಂಥರೆಯ ಆ ದಿನದ ನಡೆ–ನುಡಿಗಳಿಂದ ಬೆರಗಾದಳು. ಮತ್ತಷ್ಟು ಮಂಥರೆ ಕುಪಿತಳಾಗಿ ತಾನೊಬ್ಬಳೇ ಕೈಕೇಯಿಯ ಹಿತೈಷಿ ಎಂಬಂತೆ ನಟಿಸಿ ಶ್ರೀರಾಮನ ಪಟ್ಟಾಭಿಷೇಕವನ್ನು ತಿಳಿಸಿದಳು. ಕೈಕೇಯಿ ಹರ್ಷಿತಳಾಗಿ ಅವಳಿಗೊಂದು ಆಭರಣವನ್ನು ಪಾರಿತೋಷಕವಾಗಿ ಕರುಣಿಸಿದಳು. ಶ್ರೀರಾಮನ ಪಟ್ಟಾಭಿಷೇಕವು ತನಗೆ ಸರ್ವೋತ್ತಮವಾದ ಶುಭವಾರ್ತೆ ಎಂದು ಕೈಕೇಯಿ ಹೇಳಿದಳು. ಇದನ್ನು ನೋಡಿದಾಗ ಶ್ರೀರಾಮನ ವ್ಯಕ್ತಿತ್ವದ ಪ್ರಭಾವ ಎಷ್ಟರಮಟ್ಟಿನದೆಂದು ಅರಿತು ಆಭರಣವನ್ನು ಅವಳ ಮುಂದೆಯೇ ನೆಲಕಪ್ಪಳಿಸಿ ಒಡತಿಯ ಮೇಲಿನ ಪ್ರೀತಿಯ ಔನ್ನತ್ಯದ ಪ್ರದರ್ಶನವನ್ನು ವ್ಯಕ್ತಪಡಿಸಿದಳು. ಸವತಿಯ ಮಗನೆಂದರೆ ಶತ್ರುವೇ ಸರಿ ಕೌಸಲ್ಯಯು ರಾಜಲಕ್ಷ್ಮಿಯನ್ನು ಪಡೆದು ಸವತಿಯರನ್ನು ತುಳಿದು ನೆಮ್ಮದಿಯಾಗಿರುತ್ತಾಳೆ. ನೀನು ಕೈಮುಗಿದುಕೊಂಡು ತೊತ್ತಿನಂತೆ ಕೌಸಲ್ಯಯನ್ನು ಸೇವಿಸುತ್ತಿರಬೇಕಾಗುವುದು ನಮ್ಮ ಜೊತೆಗೆ ನೀನೊಬ್ಬಳು ಅವಳ ಪರಿಚಾರಕಳಾಗುತ್ತಿಯೇ ನಿನ್ನ ಮಗನು ರಾಮನಿಗೆ ದಾಸನಾಗುತ್ತಾನೆ. ಎಂದು ಬಹು ಸಂಕಟ ಪಟ್ಟುಕೊಂಡು ನಿವೇದಿಸಿಕೊಂಡಳು. ಕೈಕೇಯಿಯು ತನ್ನ ಶುದ್ಧ ಬುದ್ಧಿಯ ಹಿಡಿತದಲ್ಲೇ ಇದ್ದಳು. ಸಂತೋಷವನ್ನು ವ್ಯಕ್ತಪಡಿಸುತ್ತಾ ಶ್ರೀರಾಮನು ಸರ್ವಗುಣ ಸಂಪನ್ನ ಹಿರಿಯ ಮಗ ವಂಶಪಾರಂಪರ್ಯವಾಗಿ ಬಂದ ಧರ್ಮವನ್ನು ಪಾಲಿಸುವ ಹಕ್ಕು ಅವನಿಗೆ ಇದೆ. ಒಂದು ವೇಳೆ ಭರತನು ಬಯಸಿದರೆ ನೂರು ವರ್ಷಗಳ ಮೇಲಾದರೂ ಪಿತ್ರಾರ್ಜಿತವಾದ ರಾಮನ ರಾಜ್ಯದಲ್ಲಿ

ಒಂದು ಭಾಗವನ್ನು ತೆಗೆದುಕೊಳ್ಳಬಲ್ಲನು. ನನಗೆ ಭರತನು ಎಷ್ಟು ಬೇಕಾದವನು ರಾಮನು ಅಷ್ಟೇ ಬೇಕಾದವನು ರಾಮನು ಇನ್ನೂ ಒಂದು ತೂಕ ಹೆಚ್ಚು. ರಾಮನಿಗೆ ರಾಜ್ಯ ಬಂದರೆ ಭರತನಿಗೆ ಬಂದ ಹಾಗೆಯೇ ಸರಿ ಎಂದು ಹೇಳಿ ಶುಭಕಾರ್ಯಕ್ಕೆ ನೀನೇಕೆ ಉರಿದು ಹೋಗುವವಳಂತೆ ಸಂಕಟ ಪಡುತ್ತಿಯೇ ಎಂದು ಕೈಕೇಯಿ ಆಶ್ಚರ್ಯ ಪಡುತ್ತಾಳೆ. ಆದರೆ ಕುಬ್ಜೆ ಪಾಪಿಷ್ಠೇ ಅಷ್ಟಕ್ಕೆ ಸುಮ್ಮನಾಗುವುದಿಲ್ಲ. ಬಹು ಸಂಕಟವನ್ನು ಪ್ರದರ್ಶಿಸುತ್ತಾ ಕೈಕೇಯಿಯ ಮತಿಗೇಡಿತನವನ್ನು ಹಳಿಯುತ್ತಾ, ರಾಮನಿಗೆ ಸಿಕ್ಕಿದರೆ ಕಂಟಕವೂ ತೊಲಗಿ ಹೋಗಲೆಂದು ಅವನು ನಿಶ್ಚಯವಾಗಿಯೂ ಭರತನನ್ನು ದೇಶ ಭ್ರಷ್ಟನಾಗಿ ಮಾಡುವನು. ಇಲ್ಲವೇ ಅವನನ್ನು ಕೊಂದು ಹಾಕುವನು. ಭರತನು ಸಹಜವಾಗಿ ರಾಮನಿಗೆ ಶತ್ರುವಾಗಿದ್ದಾನೆ ಆದ್ದರಿಂದ ಭರತನು ತಂದೆಯ ಒಪ್ಪಿಗೆಯಂತೆ ರಾಜ್ಯವನ್ನು ಪಡೆದರೆ ಮಾತ್ರ ನಿನಗೂ ನಿನ್ನ ಬಂಧುಗಳಿಗೂ ಶ್ರೇಯಸ್ಸು ಉಂಟು ಇಲ್ಲದಿದ್ದರೆ ನಿನ್ನ ಮಗನು ರಾಜಗೃಹದಿಂದ ನೇರವಾಗಿ ಅರಣ್ಯಕ್ಕೆ ಹೊರಟು ಹೋಗುವುದು ಕ್ಷೇಮಕರವೆಂದು ಕಂಬನಿ ತುಂಬಿಕೊಂಡು ಹೇಳುತ್ತಾಳೆ . ನೀನು ಸೌಭಾಗ್ಯದ ಗರ್ವದಿಂದ ರಾಮನ ತಾಯಿಯನ್ನು ಇದುವರೆಗೆ ಅಲಕ್ಷ ಮಾಡಿದ್ದಿಯೇ ನಿನ್ನ ರೂಪಿನ ಮೇಲಿನ ಪ್ರೀತಿಯನ್ನು ತೋರಿಸುವುದಕ್ಕೋಸ್ಕರ ನಿನಗೆ ಪ್ರಿಯರಾಗುವ ರೀತಿಯಲ್ಲಿ ದಶರಥ ಕೌಸಲ್ಯಯನ್ನು ಹಲವು ವಿಧದಲ್ಲಿ ಪೀಡಿಸಿದ್ದಾನೆ. ಮಗ ಗದ್ದಿಗೆ ಏರಿದ ಮೇಲೆ ಕೌಸಲ್ಯ ನಿನಗೆ ಅಸಲು, ಬಡ್ಡಿ, ಚಕ್ರ ಬಡ್ಡಿ ಸಮೇತ ಸಾಲವನ್ನು ತೀರಿಸುತ್ತಾಳೆ. ನಿನ್ನ ಮಗನಿಗೆ ರಾಜ್ಯ ದೊರೆಯುವುದು ಹೇಗೆ ಎಂಬುದನ್ನು ಆಲೋಚಿಸು ಎಂದು ಮಂಥರೆಯು ನೊಂದು ನುಡಿದು ವಿಷ ಬೀಜವನ್ನು ಫಲವತ್ತಾದ ಕ್ಷೇತ್ರದಲ್ಲಿ ಹಾಕುತ್ತಾಳೆ.

ನಿರ್ದೋಷಿ ಕೈಕೇಯಿಯು ಮಂಥರೆಯು ಹಾಕಿದ ಚಾಡಿಯ ಮೋಡಿಯ ಬಲೆಗೆ ಬಿದ್ದಳು. ದೀರ್ಘವಾದ ನಿಟ್ಟುಸಿರಿಟ್ಟಳು. ಅವಳಿಗೆ ಸಿಟ್ಟು ಬಂದಿತು. ಆಲೋಚಿಸಿ ಹೇಳು ಹೇಳೆಂದಳು. ಆಗ ದಶರಥನು ಕೊಟ್ಟ ವರಗಳನ್ನು ಮಂಥರೆ ಜ್ಞಾಪಿಸಿದಳು. ಅದರಂತೆ ನೀನು ಭರತನಿಗೆ ಪಟ್ಟಾಭಿಷೇಕವಾಗಬೇಕೆಂದು ರಾಮನು 14 ವರ್ಷಗಳ ಕಾಲ ವನವಾಸಕ್ಕೆ ಹೋಗಬೇಕೆಂದು ಕೇಳೆಂದಳು. ಮಹಾರಾಜರು ಬರುವುದರೊಳಗಾಗಿ ಕೋಪಗೃಹಕ್ಕೆ ಹೋಗಿ ಸಿಟ್ಟಿನಿಂದ ಬರಿಯ ನೆಲದ ಮೇಲೆ ಮಲಗಿಕೋ ಕೊಳೆ ಬಟ್ಟೆಯನ್ನು ಹಾಕಿಕೊ, ಪತಿಯನ್ನು ಕಣ್ಣೆತ್ತಿಯೂ ನೋಡಬೇಡ, ಮಾತನಾಡಬೇಡ ಸುಮ್ಮನೆ ಶೋಕ ಮಗ್ನಳಾಗಿ ಅಳುತ್ತ ನೆಲದ ಮೇಲೆ ಮಲಗಿಕೋ. ಮಹಾರಾಜನಿಗೆ ನಿನ್ನ ಮೇಲೆ ಬಹಳ ಪ್ರೀತಿ ಇದೆ ನಿನಗೋಸ್ಕರ ಬೆಂಕಿಯಲ್ಲಾದರೂ ಬೀಳುತ್ತಾನೆ, ನಿನ್ನ ಸಂತೋಷಕ್ಕಾಗಿ ಪ್ರಾಣವನ್ನಾದರೂ ಕೊಡುತ್ತಾನೆ. ಈ ಎರಡು ವರಗಳನ್ನು ಪಟ್ಟು ಹಿಡಿ ಇನ್ಯಾವ ಅಂಶಕ್ಕೂ ಮಣಿಯಬೇಡ ಪ್ರಮಾಣಪೂರ್ವಕವಾಗಿ ಅವನಿಂದ ಮಾತನ್ನು ಪಡೆ ಎಂದು ಕುಬ್ಜೆಯು ಅನರ್ಥವನ್ನೇ ಕೈಕೇಯಿಯಿಂದ ಮಾಡಿಸುತ್ತಾಳೆ. ಕೈಕೇಯಿಯು, ಹರ್ಷಿತಳಾಗಿ ನೀನೆ ನನ್ನ ಪರಮ ಹಿತೈಷಿ ಉಳಿದವರೆಲ್ಲ ಪಾಪಿಗಳೆಂದು ಹೇಳಿ ಮಂಥರೆಯನ್ನು ನೋಡುತ್ತಾಳೆ. ಅಷ್ಟವಕ್ರದವಳು ಈಗ ಸುರಸುಂದರಿಯಂತೆ ಕೈಕೇಯಿಯ ಕಣ್ಣಿಗೆ ಕಂಗೊಳಿಸುತ್ತಾಳೆ. ರಾಮನಲ್ಲಿ ಅಭೇದ್ಯವಾದ ಪುತ್ರ ವಾತ್ಸಲ್ಯವನ್ನು ಇಟ್ಟುಕೊಂಡಿದ್ದ ಭರತ ಮಾತೆ ಕುಬ್ಜೆಯ ಮಾತಿನ ಪ್ರಭಾವಕ್ಕೊಳಗಾಗಿ ತನ್ನ ಆಕಾರವನ್ನು ಬದಲಾಯಿಸುತ್ತಾಳೆ. ತನ್ನ ಸ್ವಬುದ್ಧಿಯನ್ನು ಬಿಟ್ಟು ಪರಬೋಧನೆಗೆ ಮಾರುಹೋಗಿ ಶ್ರೀ ರಾಮನು ಕಾಡಿಗೆ ಹೋಗಬೇಕೆಂದು ಕೇಳಿಕೊಳ್ಳುತ್ತಾಳೆ. ರಾಮ ಅರಣ್ಯದಲ್ಲಿ ವಾಸ ಮಾಡಬೇಕೆಂದು ನಿರ್ಧರಿಸುತ್ತಾಳೆ ಯಾವ ಅರಣ್ಯದಲ್ಲಿ ಜನ ಸಹಾಯವೇ ಸಿಗುವುದಿಲ್ಲವೋ ಅಂತ ಅರಣ್ಯಕ್ಕೆ ರಾಮ ಹೋಗಬೇಕು ಅದೇ ದಂಡಕಾರಣ್ಯ. ವರ ಕೇಳುವಾಗ ದೂರದರ್ಶಿನಿಯಾಗಿ ಎಲ್ಲವನ್ನು ಗಮನದಲ್ಲಿಟ್ಟು

ಕೊಂಡು ಕೇಳುತ್ತಾಳೆ. ಮಂಥರೆಯ ಮಾಟಕ್ಕೆ ಮಣಿಯುತ್ತಾಳೆ.

ಶ್ರೀರಾಮನು ಪಿತೃವಾಕ್ಯ ಪರಿಪಾಲನಾರ್ಥವಾಗಿ, ಕೈಕೇಯಿಯ ಮನಸ್ಸನ್ನು ಸಂತೋಷಪಡಿಸುವುದಕ್ಕಾಗಿ, ಪಿತನನ್ನು ಸತ್ಯಸಂಧನನ್ನಾಗಿ ಉಳಿಸುವುದಕ್ಕಾಗಿ, ವನವಾಸಕ್ಕೆ ಸಿದ್ಧನಾಗಿ ಮಾತೆ ಕೌಸಲ್ಯ ಅನುಮತಿ ಪಡೆದು ಪತ್ನಿ ಸೀತೆ ಹಾಗೂ ಸಹೋದರ ಲಕ್ಷ್ಮಣನೊಡಗೂಡಿ ದಂಡಕಾರಣ್ಯಕ್ಕೆ ಹೊರಡುತ್ತಾನೆ. ಲೋಕ ನಿಂದೆ ಏಕಮುಖಿಯಾಗಿ ಕೈಕೇಯಿ ದೇವಿಯ ಮೇಲೆ ಅಪ್ಪಳಿಸುತ್ತದೆ ಎಂದು ಮಂಥರೆಗೂ ಗೊತ್ತಿತ್ತು. ದಶರಥ ವಶಿಷ್ಠ ಸುಮಂತ್ರಾದಿಗಳು ಕೈಕೇಯಿಯನ್ನು ಕ್ರೂರ ವಾಕ್ಯಗಳಿಂದ ಸದೆಬಡಿಯುವರೆಂದು ತಿಳಿದಿದ್ದಳು. ಹಾಗಾಗಿ ಮೌನದಿಂದ ಕಲಹ ನಾಶವೆಂಬುಕ್ತಿಯನ್ನು ಚೆನ್ನಾಗಿ ಮನದಟ್ಟಾಗುವಂತೆ ಕೈಕೇಯಿಗೆ ಬೋಧಿಸಿ ಸ್ಥಿರ ಮನಸ್ಸನ್ನು ಕಾಪಾಡಿಕೊಳ್ಳಬೇಕೆಂದು ತಿಳಿಸುತ್ತಾಳೆ. ಕುಟಿಲ ಬುದ್ಧಿಯವಳಾದ ಮಂಥರೆ ಮೀನಿಗೆ ಗಾಳ ಹಾಕಿ ಎಳೆದು ಬಿಡುವ ಹಾಗೆ ಶುದ್ಧ ಮನಸ್ಸಿನವಳಾದ ಕೈಕೇಯಿಯನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳುತ್ತಾಳೆ . ಚಿಕ್ಕಂದಿನಿಂದ ಅವಳ ಲಾಲನೆ ಪಾಲನೆಯಲ್ಲಿ ಪಾಲ್ಗೊಂಡು ಅವಳ ದೌರ್ಬಲ್ಯಗಳನ್ನು ಅರಿತಿದ್ದಳು. ಹಾಗಾಗಿ ಸವತಿ ಮಾತ್ಸರ್ಯದ ಆಯುಧವನ್ನು ಹಿಡಿದು ಕೈಕೇಯಿಯ ಮನಸ್ಸನ್ನು ಕೆಡಿಸಿ ಸತ್ಯಸಂದ, ಧರ್ಮಿಷ್ಠ, ವಿಶಾಲ ಹೃದಯದ ರಾಮನನ್ನು ಕಾಡಿಗೆ ಕಳಿಸಿದಳು. ಶ್ರೀ ರಾಮನ ವನವಾಸಕ್ಕೆ ಮಂಥರೆಯು ಕಾರಣಳಲು. ಇದನ್ನು ಬೇರೆ ಬೇರೆ ಪಾತ್ರಗಳ ಬಾಯಿಂದ ವಾಲ್ಮೀಕಿ ಹೇಳಿಸುತ್ತಾರೆ. ನಿರ್ದಿಷ್ಟವಾಗಿ ದಶರಥನೆ ಮಂಥರೆಯು ತರಲೆ ವ್ಯಕ್ತಿತ್ವವೆಂದು ಹೇಳಿ ಶಂಕಿಸಿದ್ದಾನೆ. ಶ್ರೀರಾಮನು ಈ ಗೂನಿ ಇಷ್ಟಕ್ಕೆಲ್ಲ ಕಾರಣವೆಂದು ನಿಂದಿಸುವ ಮನೋಮಟ್ಟದಲ್ಲಿರಲಿಲ್ಲ.

ಮಮತೆಯ ಸುಳಿಮಂಥರೆ ರಾಷ್ಟ್ರಕವಿ ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಅಯೋಧ್ಯಾ ಸಂಪುಟದಲ್ಲಿ ಬರುವ ವಿಶೇಷ ಘಟ್ಟ. ಇಲ್ಲಿ ಮಂಥರೆಯ ಪಾತ್ರದ ಹೊಸ ದೃಷ್ಟಿಕೋನದ ವಿಶ್ಲೇಷಣೆಯನ್ನು ನೋಡಬಹುದು. ಸಾಂಪ್ರದಾಯಿಕ ರಾಮಾಯಣದಲ್ಲಿ ಮಂಥರೆಯನ್ನು ಕೇವಲ ಕುಟಿಲ ಹಾಗೂ ಖಳನಾಯಕಿಯಂತೆ ಚಿತ್ರಸಿದ್ದರೆ, ಕುವೆಂಪುರವರು ಅವಳನ್ನು ಮಾನವೀಯ ನೆಲಗಟ್ಟಿನಲ್ಲಿ ನೋಡಿದ್ದಾರೆ ಹಾಗೂ ಮನೋವಿಜ್ಞಾನದ ಹಿನ್ನೆಲೆಯಲ್ಲಿ ಪಾತ್ರಕ್ಕೆ ಕ್ರಾಂತಿಕಾರಕವಾದ ಅರ್ಥವನ್ನು ನೀಡಿದ್ದಾರೆ. ಮಂಥರೆಯು ಕೈಕೇಯಿಯ ಮೇಲಿಟ್ಟಿರುವ ಅತಿ ಪ್ರೀತಿ ಮತ್ತು ಕಾಳಜಿ ಅವಳ ತೀರ್ಮಾನಗಳಿಗೆ ಕಾರಣ ಎಂಬುದನ್ನು ಕಾವ್ಯದಲ್ಲಿ ತೋರಿಸಲಾಗಿದೆ. ಅವಳ ಮನಸ್ಸಿನಲ್ಲಿರುವ ಮಮತೆ ಮತ್ತು ಆಳವಾದ ಒಡನಾಟದ ಸುಳಿಯನ್ನು ಕವಿಗಳು ಅತ್ಯಂತ ಸುಂದರವಾಗಿ ವರ್ಣಿಸಿದ್ದಾರೆ. ಕುವೆಂಪುರವರ ಶ್ರೀ ರಾಮಾಯಣ ದರ್ಶನಂ ಕನ್ನಡ ಸಾಹಿತ್ಯದ ಮಹತ್ವದ ಮಹಾಕಾವ್ಯವಾಗಿದೆ. ವಾಲ್ಮೀಕಿ ರಾಮಾಯಣದ ಕಥೆಯನ್ನು ಆಧರಿಸಿಕೊಂಡಿದ್ದರು ಕುವೆಂಪು ಅವರು ತಮ್ಮ ವೈಚಾರಿಕತೆ, ಮಾನವೀಯ ದೃಷ್ಟಿಕೋನ ವಿಶ್ವಮಾನವ ಸಂದೇಶದ ಮೂಲಕ ರಾಮಾಯಣದ ಪಾತ್ರಗಳಿಗೆ ಹೊಸ ಆಯಾಮವನ್ನು ನೀಡಿದ್ದಾರೆ.

ಈ ಕೃತಿಯಲ್ಲಿ ಮಂಥರೆ ಪಾತ್ರವು ಪ್ರಮುಖವಾದದ್ದು. ರಾಮನ ಪಟ್ಟಾಭಿಷೇಕವನ್ನು ತಡೆಯುವ ಹಾಗೂ ರಾಮನ ವನವಾಸಕ್ಕೆ ಕಾರಣವಾಗುವ ಘಟನೆಗಳಲ್ಲಿ ಮಂಥರೆ ಪ್ರಮುಖ ಪಾತ್ರ ವಹಿಸುತ್ತಾಳೆ. ಕೈಕೇಯಿಗೆ ರಾಮನ ಪಟ್ಟಾಭಿಷೇಕದ ವಿಚಾರದಲ್ಲಿ ಯಾವುದೇ ವಿರೋಧವಿರುವುದಿಲ್ಲ. ರಾಮನು ತನ್ನ ಮಗನಂತೆ ಎಂದು ಭಾವಿಸುತ್ತಾಳೆ. ಆದರೆ ಮಂಥರೆ ತನ್ನ ಮಾತಿನ ಚಾತುರ್ಯದಿಂದ ಕೈಕೇಯಿಯ ಮನಸ್ಸನ್ನು ಬದಲಾಯಿಸುತ್ತಾಳೆ. ರಾಮನು ರಾಜನಾದರೆ ಭರತನ ಸ್ಥಾನಮಾನಕ್ಕೆ ತೊಂದರೆಯಾಗುತ್ತದೆ ಎಂದು ಆಕೆಯನ್ನು ನಂಬಿಸುತ್ತಾಳೆ. ಮಂಥರೆಯ ಮಾತುಗಳಿಂದ ಕೈಕೇಯಿಯ ಮನಸ್ಸು ಸಂಪೂರ್ಣವಾಗಿ ಬದಲಾಗುತ್ತದೆ. ದಶರಥನು ನೀಡಿದ ಮಾತನ್ನು ಉಳಿಸಿಕೊಳ್ಳಬೇಕಾದ ಕಾರಣ

ಕೈಕೇಯಿಯ ಬೇಡಿಕೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಹೀಗೆ ರಾಮನಿಗೆ ವನವಾಸ ವಿಧಿಯಾಗುತ್ತದೆ. ಮಂಥರೆಯ ಪಾತ್ರದ ವಿಶೇಷತೆ ಎಂದರೆ ಅವಳು ಕೇವಲ ಕಥೆಯಲ್ಲಿ ಒಂದು ಸಣ್ಣ ಪಾತ್ರವಾಗಿ ಉಳಿಯುವುದಿಲ್ಲ. ಅವಳ ಮಾತುಗಳು ರಾಮಾಯಣದ ಮುಂದಿನ ಅನೇಕ ಘಟನೆಗಳಿಗೆ ಕಾರಣವಾಗುತ್ತದೆ. ರಾಮನು ವನವಾಸಕ್ಕೆ ತೆರಳುವುದು, ಸೀತಾ ಲಕ್ಷ್ಮಣರು ಅವನೊಂದಿಗೆ ಹೋಗುವುದು, ನಂತರ ಸೀತೆ ಅಪಹರಣ, ರಾಮ ರಾವಣರ ಯುದ್ಧದಂತಹ ಘಟನೆಗಳ ಸರಣಿಗೆ ರಾಮನ ವನವಾಸ ಪ್ರಮುಖ ಕಾರಣವಾಗುತ್ತದೆ. ಹಾಗಾಗಿ ಕುವೆಂಪುರವರ ದೃಷ್ಟಿಯಲ್ಲಿ ಮಂಥರೆಯನ್ನು ಕೇವಲ ದುಷ್ಟದಾಸಿ ಎಂದು ನೋಡುವುದಕ್ಕಿಂತ ಮಾನವನ ಮನಸ್ಸಿನಲ್ಲಿರುವ ಸ್ವಾರ್ಥ ಭಯ ಅಸೂಯೆ ಆಸೆ ಮತ್ತು ಸಂಕುಚಿತ ಭಾವನೆಗಳ ಪ್ರತೀಕವಾಗಿ ನೋಡಬಹುದು. ಅವಳ ಪಾತ್ರದ ಪ್ರಮುಖ ಅಂಶವೆಂದರೆ ಮಾತಿನ ಶಕ್ತಿ. ಅವಳ ಬಳಿ ಯಾವುದೇ ರಾಜಕೀಯ ಅಧಿಕಾರವಿಲ್ಲ. ಆದರೂ ತನ್ನ ಮಾತು ಮತ್ತು ಪ್ರಭಾವದ ಮೂಲಕ ರಾಜ ಮನೆತನದ ದೊಡ್ಡ ನಿರ್ಧಾರವನ್ನೇ ಬದಲಾಯಿಸಲು ಯಶಸ್ವಿಯಾಗುತ್ತಾಳೆ. ಒಟ್ಟಿನಲ್ಲಿ ಶ್ರೀ ರಾಮಾಯಣ ದರ್ಶನಂ ಅಲ್ಲಿ ಮಂಥರೆ ಕಥೆಯ ಪ್ರಮುಖ ತಿರುವಿಗೆ ಕಾರಣವಾಗುವ ಪ್ರಭಾವಶಾಲಿ ಪಾತ್ರ. ಅವಳ ಮೂಲಕ ಕುವೆಂಪು ಮಾನವನ ಮನಸ್ಸಿನ ದುರ್ಬಲತೆಗಳನ್ನು ತಪ್ಪು ಸಲಹೆ ಪರಿಣಾಮವನ್ನು ಮತ್ತು ಆಸೆ ಸ್ವಾರ್ಥಗಳು ಉಂಟುಮಾಡುವ ಪರಿಣಾಮಗಳನ್ನು ಚಿತ್ರಿಸಿದ್ದಾರೆ. ರಾಮಾಯಣದ ಕಥೆಯನ್ನು ಮುಂದುವರಿಸುವಲ್ಲಿ ಮಹತ್ವದ ಪಾತ್ರ ವಹಿಸುವುದರ ಜೊತೆಗೆ ಮಾನವ ಸ್ವಭಾವದ ಸಂಕೀರ್ಣತೆಯನ್ನು ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ.

ಎಚ್. ಎಸ್. ವೆಂಕಟೇಶ್‌ಮೂರ್ತಿಯವರು ತಮ್ಮ 'ಮಂಥರಾ' ನಾಟಕದಲ್ಲಿ ಹೇಳುವಂತೆ ಕಥೆಯ ಬೆಳವಣಿಗೆಯಲ್ಲಿ ತಿರುವು ನೀಡಿದವಳು. ರಾಮಾಯಣದಲ್ಲಿ ಕೇವಲ ದುಷ್ಟ ಪಾತ್ರವಾಗಿ ಗೋಚರಿಸಿದರೆ ಇಲ್ಲಿ ಮಂಥರ ಹೆಣ್ಣಿನ ಅಂತರಂಗದ ಮತ್ತೊಂದು ಚಿತ್ರವಾಗಿ ಕಾಣಿಸುತ್ತಾಳೆ. ಮಂಥರೆಯ ಬೋಧನೆಯಿಂದ ಕೈಕೇಯಿ ಹಕ್ಕು ಮತ್ತು ಯೋಗ್ಯತೆಯನ್ನು ಅಲಕ್ಷಿಸಿ ಅಧಿಕಾರ ಗದ್ದುಗೆ ತನ್ನ ಮಗನಿಗೆ ಲಭಿಸುವಂತೆ ಯತ್ನಿಸುತ್ತಾಳೆ. ತಾಮಸಕ್ಕೆ ಸಾತ್ವಿಕತೆಯು ಕ್ರಮೇಣ ಬದಲಾಗುವುದನ್ನು ಮಂಥರೆಯ ಮಾತಿಗೆ ಒಲಿಯುವ ಕೈಕೇಯಿಯ ನಿಲುವು ಇದನ್ನು ಸಾಧರಪಡಿಸುತ್ತದೆ. ಸೀತಾರಾಮರ ಬಾಳ ದೋಣಿಯು ಸವಿಯಾದ ಹಾಲು ಜೇನಿನಲ್ಲಿ ತೇಲುತ್ತಿರಲು ಇದ್ದಕ್ಕಿದ್ದ ಹಾಗೆಯೇ ಮಂಥರೆಯ ಮಮತೆಯ ಸುಳಿಗೆ ಸಿಲುಕಿ ಅವರ ಸುಖದ ದೋಣಿ ಮುಳುಗಿತು. ಮಂಥರೆಯ ಮಮತೆ ಎಂಬ ಆದಿಶೇಷನು ಕೈಕೇಯಿ ಎಂಬ ಮಂದಾರ ಪರ್ವತದಿಂದ ಸಮುದ್ರವನ್ನು ಕಡೆಯದಿದ್ದರೆ ಮಹಾರತ್ನಗಳು ಹುಟ್ಟುತ್ತಿರಲಿಲ್ಲ. ಮಹಾದೈವೇಚ್ಛೆ ಜೀವಿಗಳಿಗೆ ಸ್ವಚ್ಛ ಸ್ವಾತಂತ್ರ್ಯವನ್ನು ನೀಡಿದ್ದರು ಜಗತ್ತನ್ನು ಸೂಕ್ಷ್ಮಾತಿ ಸೂಕ್ಷ್ಮ ತಂತ್ರದಿಂದ ಆಳುತ್ತಿದೆ. ಈ ವಿಧಿಯ ಕೈಯಲ್ಲಿ ಮಂಥರೆ ಸೀತೆ ರಾಮ ರಾವಣ ಎಲ್ಲರೂ ಸೂತ್ರದ ಗೊಂಬೆಗಳು. ರಾವಣನ ವಿಧಿಯು ತನ್ನ ತಂತ್ರದ ಜಾಲವನ್ನು ಮಂಥರೆಯ ಕನಸಿನಲ್ಲಿ ಹರಡಿತು. ರಾಮನ ಆಳ್ವಿಕೆಯಲ್ಲಿ ನೀನು ತುತ್ತಾಗುತ್ತಿಯೇ. ಕೌಸಲ್ಯೆಯ ಕಾಲ ಕಸದಂತೆ. ಎಲ್ಲರೂ ನಿನ್ನಂತೆ ಸಾತ್ವಿಕ ಎಂದು ನಂಬಿ ನೀನು ಕೆಡುತ್ತೀಯೆ. ಇದು ಒಳ ಸಂಚು ಎಂದು ಮಂಥರೆ ಕೈಕೇಯಿಯ ಮನಸ್ಸನ್ನು ಕದಡಿದಳು. ಎದ್ದು ಹೋಗುತ್ತಿದ್ದ ಮಂಥರೆಯನ್ನು ಮುಳುಗುವವನು ಪ್ರಾಣದಾಸೆಗೆ ಮೊಸಳೆಯನ್ನು ತಬ್ಬಿಕೊಳ್ಳುವಂತೆ ಕೈಕೇಯಿಯು ಅಪ್ಪಿಕೊಂಡಳು. ಕಂಗೆಟ್ಟ ನನಗೆ ದಾರಿ ತೋರಿಸಿದ ನೀನೇ ನನ್ನ ಭಾಗ್ಯ ದೇವತೆ, ನೀನೇ ನನ್ನ ತಾಯಿ. ನೀನು ಕೈಬಿಟ್ಟರೆ ಇನ್ನಾರು ಗತಿ ಇದುವರೆಗೂ ಕಣ್ಣಿದ್ದು ಕುರುಡಿಯಾಗಿದ್ದೆ. ಈ ದಿನ ನೀನು ನನಗೆ ರೂಪಸಿಯಾಗಿ ಕಾಣುತ್ತಿರುವೆ ನಿಜವಾದ ಸೌಂದರ್ಯ ಆತ್ಮಕ್ಕೆ ಸೇರಿದ್ದು ನಿನಗಿಂತ

ಸುಂದರಿಯರು ಯಾರು? ನೀನು ಗೂನಿ ಆದರೆ ಏನು ಗಂಧದ ಕೊರಡು ಡೊಂಕಾದ ಮಾತ್ರಕ್ಕೆ ಏನು ಲೋಪ ಎಂದು ಹೇಳುತ್ತಾ ದಶರಥನ ರಾಣಿ ಸರ್ವ ಸೌಂದರ್ಯಗಳ ನಿಧಿ ಕೈಕೇಯಿಯು ವಿರೂಪವನ್ನು ಮುದ್ದಾಡಿದಳು. ಗಾಳದ ನೇಣನ್ನು ಮೀನು ಕಚ್ಚಿದಾಗ ದಾರವನ್ನು ಸ್ವಲ್ಪ ಸಡಿಲ ಬಿಡುವಂತೆ ಕುಲಸಾಗರದ ಕಮಲವಾದ ಕೈಕೇಯಿಯ ಮೋಹದ ಬಿಸಿಲನ್ನು ಬೀರಿ ಪುನಃ ಹೇಳಿದಳು. ಪುನಃ ಆಲೋಚಿಸು ದುಡುಕಬೇಡ ಇದೆಲ್ಲವನ್ನು ನಿನ್ನ ಮತ್ತು ಭರತನ ಮೇಲಿನ ಮಮತೆಯಿಂದ ಮತ್ತು ಅಕ್ಕರೆಯ ವಾತ್ಸಲ್ಯದಿಂದ ಹೇಳುತ್ತೇನೆ ರಾಮನ ಮೇಲಿನ ದ್ವೇಷದಿಂದಲ್ಲ. ರಾಮನು ಸುಖವಾಗಿರಲಿ ಅದೇ ನನ್ನ ಅಪೇಕ್ಷೆ. ಆದರೂ ಕೇಳು ಈ ಚಕ್ರಾಧಿಪತ್ಯವನ್ನು ನೀನು ದಶರಥನಿಂದ ಕಸಿದುಕೊಂಡು ಭರತನಿಗೆ ಕೊಟ್ಟರು ಸಹ ರಾಮನ ಪಕ್ಷವು ಒಳಸಂಚುಗಳನ್ನು ಭರತನನ್ನು ಖಂಡಿತವಾಗಿ ಹಳ್ಳಕ್ಕೆ ಕೆಡುವುತ್ತದೆ ಎಂದು ಭರತನ ಭವಿಷ್ಯದ ಬಗ್ಗೆ ಕೈಕೇಯಿಯಲ್ಲಿ ಆತಂಕ ಮೂಡಿಸುತ್ತಾಳೆ.

ಮಂಥರೆ ಕುತಂತ್ರಿಯಾದರೂ ದೂರದೃಷ್ಟಿಯುಳ್ಳವಳು. ಅಯೋಧ್ಯ ಕಾಂಡದಲ್ಲಿ ಕಾಣಿಸಿಕೊಳ್ಳುವ ಪಾತ್ರ. ಮಂಥರೆ ದೇಹದ ವೈಕಲ್ಯ ಹೊಂದಿದವಳಾಗಿ ಅವಳನ್ನು ಕುರೂಪಿಯಂತೆ ಚಿತ್ರಿಸಲಾಗಿದ್ದರೂ ಅವಳ ಮಾತಿನ ಪ್ರಭಾವ ಕೈಕೇಯಿ ಮೇಲಾಗುತ್ತದೆ. ಇಲ್ಲಿ ಅವಳ ಮಾತಿನ ಸಾಮರ್ಥ್ಯವನ್ನು ನಾವು ಗುರುತಿಸಬಹುದು. ಕೈಕೇಯಿ ಹಿತವನ್ನು ನೋಡಿಕೊಳ್ಳುವಂತೆ ವರ್ತಿಸುವ ಮಂಥರೆ ರಾಮನ ಪಟ್ಟಾಭಿಷೇಕವನ್ನು ತಡೆದು ಭರತನ ಭವಿಷ್ಯದ ಬಗ್ಗೆ ಕೈಕೇಯಿಯಲ್ಲಿ ಆತಂಕ ವ್ಯಕ್ತಪಡಿಸಿ ಕೈಕೇಯಿಯನ್ನು ಎಚ್ಚರಿಸಿದಳು. ರಾಮ ರಾಜನಾದರೆ ಭರತನಿಗೆ ರಾಜ್ಯ ಸಿಗುವುದಿಲ್ಲ, ಭರತನ ಸ್ಥಾನ ಕಡಿಮೆಯಾಗುತ್ತದೆ, ಕೈಕೇಯಿಯ ಭವಿಷ್ಯಕ್ಕೂ ಮಾರಕವಾಗುತ್ತದೆ ಎಂದು ತನ್ನ ಮಾತಿನ ಪ್ರಭಾವದಿಂದ ಕೈಕೇಯಿಯ ಮನಸ್ಸನ್ನು ಪರಿವರ್ತಿಸಿದಳು ಮಂಥರೆ ಪಾತ್ರವನ್ನು ರಾಮಾಯಣದ ಕಥೆಯಲ್ಲಿ ಒಂದು ಪ್ರಮುಖ ತಿರುವಿಗೆ ಕಾರಣವಾದ ಪಾತ್ರ ಎಂದು ಕುವೆಂಪು ಗುರುತಿಸುತ್ತಾರೆ. ಅವಳನ್ನು ಕೆಟ್ಟವಳು ಎಂದು ನೋಡುವುದಕ್ಕಿಂತ ಅವಳ ಮಾತುಗಳು ಇತರ ಪಾತ್ರಗಳ ನಿರ್ಧಾರಗಳನ್ನು ಹೇಗೆ ಬದಲಾಯಿಸಿದವು ಎಂಬ ದೃಷ್ಟಿಯಿಂದ ನೋಡಿದರೆ ಇನ್ನಷ್ಟು ಆಸಕ್ತಿದಾಯಕವಾಗುತ್ತದೆ.

**ಪರಾಮರ್ಶನ ಗ್ರಂಥಗಳು**


- ಕುವೆಂಪು. (1949). *ಶ್ರೀ ರಾಮಾಯಣ ದರ್ಶನಂ.* ಕಾವ್ಯಾಲಯ
- ರಾಜಶೇಖರ್, ನಿ. (2017). *ಕುವೆಂಪು ಅವರ ಶ್ರೀ ರಾಮಾಯಣ ದರ್ಶನಂ ಗದ್ಯಾನುವಾದ.* ಐಬಿಎಚ್ ಪ್ರಕಾಶನ
- ಸೀತಾಸುತ. ರಾಮಾಯಣದಲ್ಲಿ ಸ್ತ್ರೀ ಪಾತ್ರಗಳು
- ವೆಂಕಟೇಶಮೂರ್ತಿ, ಎಚ್.ಎಸ್. *ಮಂಥರಾ.* ಅಂಕಿತ ಪುಸ್ತಕ